

# ಪ್ರಪಂಚ, ಪರಮಾರ್ಥ

ಎಲ್ಲ ಜೀವಿಗಳಂತೆ ಮಾನವನೂ ಈ ಪ್ರಪಂಚದಲ್ಲೇ ಹುಟ್ಟಿ ಬೆಳೆದಿದ್ದಾನೆ; ಇಲ್ಲೇ ಉಂಡು, ತಿಂದು, ನಿದ್ರಿಸಿ, ಓಡಾಡುತ್ತ ಜೀವನ ನಡೆಸುತ್ತಿದ್ದಾನೆ. ಭೂಮಿಯನ್ನು ಆಶ್ರಯಿಸಿ ಆಹಾರ, ನೀರು, ಗಾಳಿ, ಆಶ್ರಯಸ್ಥಾನ ಮುಂತಾದವುಗಳು ಲಭಿಸಿದರೆ, ಸೂರ್ಯ, ನಕ್ಷತ್ರ, ಅಂತರಿಕ್ಷ ಮುಂತಾದವುಗಳಿಂದ ಅಗತ್ಯವಾದ ಇತರ ಅಂಶಗಳು ಲಭಿಸುತ್ತವೆ. ಬೇರೆ ಜೀವಿಗಳಿಗೆ ಹೋಲಿಸಿದರೆ ಮಾನವನು ಹೆಚ್ಚು ಸುಖಿಯೆನ್ನಬೇಕು — ತನ್ನ ಮನಸ್ಸು, ಬುದ್ಧಿಗಳ ಸಹಾಯದಿಂದ ಪ್ರಪಂಚದ ಹಲವು ವಸ್ತುಗಳನ್ನು ತನಗೆ ಬೇಕಾದಂತೆ ಬಳಸಿಕೊಳ್ಳಲು ಅವನು ಕಲಿತಿದ್ದಾನೆ. ತನ್ನ ಬುದ್ಧಿಯ ಕಾರಣದಿಂದ ಅವನು ಇಡೀ ಪ್ರಕೃತಿಯನ್ನೇ ನಿಯಂತ್ರಿಸಿಕೊಂಡ, ಸಮಸ್ತ ಪ್ರಪಂಚವನ್ನು ಇನ್ನಷ್ಟು ಪರಿಶೋಧಿಸುತ್ತ ಹೆಚ್ಚಿನ ಬಳಕೆ ಮಾಡಿಕೊಳ್ಳಲು ಕಲಿತ. ಇಷ್ಟಾದರೂ ಮಾನವನಲ್ಲಿ ಸುಖದ ಬಯಕೆ, ಅಗತ್ಯಗಳ ಪೂರೈಕೆ ಮುಗಿದೇ ಹೋಯಿತು ಎನ್ನುವಂತಿಲ್ಲ.

ಮಾನವನ ಆಸೆ, ಬಳಕೆ, ಅನ್ವೇಷಣೆಗಳಿಗೆ ಕೊನೆಯೇ ಇಲ್ಲದಾಗಿದೆ. ಇದು ಈ ರೀತಿ ಮುಂದುವರಿದರೆ, ಮಾನವನು ತಲುಪುವ ಅಂತಿಮ ಹಂತವಾದರೂ ಯಾವುದು? ಪ್ರಪಂಚದಿಂದ ನಮಗೆ ಬೇಕಾದುದಾದರೂ ಏನು? ಪ್ರಪಂಚ ಅಸ್ತಿತ್ವದಲ್ಲಿರುವುದಾದರೂ ಏಕೆ? ಕೇವಲ ಮಾನವನ ಬಳಕೆಗಾಗಿಯೆ? ಮಾನವನು ಪ್ರಪಂಚದಲ್ಲಿ ಇದ್ದುಕೊಂಡು ಯಾವ ರೀತಿ ಬದುಕಬೇಕು? — ಈ ಪ್ರಶ್ನೆಗಳು ಸಹಜವಾಗಿ ಏಳುತ್ತವೆ. ಪ್ರಕೃತಿಯ ಮಿತಿಮೀರಿದ ಲೂಟಿ, ನಿಯಂತ್ರಣಗಳಿಂದ ಮಾನವ ಈಗಾಗಲೇ ಹಲವು ದುಷ್ಪರಿಣಾಮಗಳನ್ನು ಎದುರಿಸುತ್ತಿದ್ದಾನೆ. ಜಾಗತಿಕ ತಾಪಮಾನದ ಏರುವಿಕೆ, ಅಂತರ್ಜಲದ ಅಭಾವ, ವಾತಾವರಣದ ವೈಪರೀತ್ಯ, ಅರಣ್ಯನಾಶ ಮುಂತಾದ ತೊಂದರೆಗಳಿಂದ ಒಟ್ಟು ಜೀವಸಂಕುಲವೇ ತತ್ತರಿಸುವಂತಾಗಿದೆ. ಮಾನವನ ಬುದ್ಧಿವಂತಿಕೆ ಹತ್ತು ಹಲವು ಕ್ಷೇತ್ರಗಳಲ್ಲಿ ಅಪ್ರತಿಮವಾಗಿ ಮುನ್ನಡೆದಿವೆ, ನಿಜ. ಆದರೆ ತಾನಿರುವ ಪ್ರಪಂಚವನ್ನು ಅವನು ಹೇಗೆ ಅರ್ಥಮಾಡಿಕೊಂಡಿದ್ದಾನೆ, ತನ್ನ ಜೀವನಕ್ಕೂ ಅದಕ್ಕೂ ಎಂಥ ಸಂಬಂಧವಿರಬೇಕು — ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಬೇಕು. ಆಗ ಪ್ರಪಂಚದಲ್ಲಿ ಉತ್ತಮ ಬದುಕಿನ ಕಲ್ಪನೆ ಮೂಡಿಬರಬಹುದು.

## ಜಡ ಮತ್ತು ಚೈತನ್ಯ

ಪ್ರಪಂಚದುದ್ದಕ್ಕೂ ನಾವು ಗಮನಿಸುತ್ತೇವೆ, ಅನಂತ ಜಡ ವಸ್ತುಗಳ ರಾಶಿ ಹರಡಿಕೊಂಡಿದೆ. ನೆಲ, ನದಿ, ಪರ್ವತ, ಅರಣ್ಯ, ಸಮುದ್ರ — ಹೀಗೆ ವೈವಿಧ್ಯದಿಂದ ಕೂಡಿದ ಭೂಮಿ; ಆಕಾಶದಲ್ಲಿ ಅನಂತವಾಗಿ ವ್ಯಾಪಿಸಿರುವ ನಕ್ಷತ್ರ, ಗ್ರಹ ಮುಂತಾದವುಗಳು ನಮಗೆ ವಿಸ್ತಾರವಾದ ಪ್ರಪಂಚದ ಭೌಮದರ್ಶನವನ್ನು ಮೂಡಿಸುತ್ತವೆ. ಚಲಿಸದೆ ಬಿದ್ದಿರುವ ಈ ಜಡಪ್ರಪಂಚಕ್ಕಿಂತ ಭಿನ್ನವಾದ ಜೀವ ಜಗತ್ತುಗಳಲ್ಲೂ ಎಷ್ಟೊಂದು ವೈವಿಧ್ಯ! ನೀರಿನಲ್ಲಿ, ನೆಲದಲ್ಲಿ, ಆಕಾಶದಲ್ಲಿ ಚಲಿಸುವ ಸಣ್ಣ-ದೊಡ್ಡ ಸಹಸ್ರಾರು ಜೀವ ಸಂಕುಲಗಳು ಪ್ರಾಣಿ-ಪಕ್ಷಿ-ಜಲಚರಗಳ ರೂಪದಲ್ಲಿ ನಮ್ಮ ಸಹ ಜೀವಿಗಳೆನಿಸಿವೆ. ಸ್ಪಷ್ಟವಾಗಿ ಈ ವ್ಯತ್ಯಾಸ ನಮಗೆ ಗೋಚರವಾಗುತ್ತದೆ: ಜಡಜಗತ್ತಿಗಿಂತ ಸಂಪೂರ್ಣ ಭಿನ್ನವಾದದ್ದು ಚೈತನ್ಯದಿಂದ ಕೂಡಿದ ಜೀವಿಗಳು. ಸ್ವತಂತ್ರವಾಗಿ ಚಲಿಸುವ, ವರ್ತಿಸುವ, ಕ್ರಿಯೆಯಲ್ಲಿ ತೊಡಗುವ ಜೀವಿಗಳು ಜಡಪ್ರಪಂಚಕ್ಕಿಂತ ಎಷ್ಟೋ ಪಾಲು ಉನ್ನತ ದರ್ಜೆಯವು. ಕೇವಲ ಸಾಮಾನ್ಯ ದೃಷ್ಟಿಗೇ ಇದು ಗೋಚರವಾಗುತ್ತದೆ. ಇನ್ನು ಉನ್ನತ ಹಂತಕ್ಕೇರಿ, ಆಳವಾಗಿ ಆಲೋಚಿಸಿದಂತೆಲ್ಲ ಜೀವಜಗತ್ತಿನ ಮಹಿಮೆ ಮತ್ತಷ್ಟು ಸ್ಪಷ್ಟವಾಗಿ, ಆಶ್ಚರ್ಯಕರವೆಂಬಂತೆ ನಮಗೆ ಕಂಡುಬರುತ್ತದೆ.

ಭೌತಿಕ ವಿಜ್ಞಾನವು ಜಡಪ್ರಪಂಚವನ್ನು ಹಲವು ಬಗೆಯಲ್ಲಿ ಅಧ್ಯಯನ ಮಾಡಿ ಭೌತಶಾಸ್ತ್ರ, ರಸಾಯನ ಶಾಸ್ತ್ರಗಳೆಂಬ ದೊಡ್ಡ ವಿಜ್ಞಾನ ಶಾಸ್ತ್ರಗಳನ್ನೇ ರಚಿಸಿದೆ. ಅದೇ ರೀತಿ ಜೀವಶಾಸ್ತ್ರ, ಮಾನವ ಶಾಸ್ತ್ರಗಳೂ ವಿಸ್ತಾರವಾಗಿ ಬೆಳೆದಿವೆ. ಹೀಗಿದ್ದೂ, ಜಡ-ಚೈತನ್ಯಗಳಿಂದ ಕೂಡಿದ ಈ ಜಗತ್ತಿನ ಕೆಲವು ಮೂಲಭೂತ ರಹಸ್ಯಗಳನ್ನು ಭೇದಿಸಲು ವಿಜ್ಞಾನಕ್ಕೆ ಇನ್ನೂ ಸಾಧ್ಯವಾಗಿಲ್ಲ. ಉದಾಹರಣೆಗೆ, ಈ ಪ್ರಪಂಚ ಎಲ್ಲಿಂದ ಬಂತು? ಈ ಸೃಷ್ಟಿಯ ಉದ್ದೇಶವೇನು? ಜೀವಿಗಳಲ್ಲಿ ಕಂಡುಬರುವ ಹುಟ್ಟು-ಸಾವುಗಳ ಅರ್ಥವೇನು? ಇಂದ್ರಿಯಗಳಿಗೆ ಗೋಚರವಾಗುವ ಭೌತಿಕ ಜಗತ್ತಿನಾಚೆಗೆ ಏನಿದೆ? ತತ್ತ್ವಶಾಸ್ತ್ರ ಹಾಗೂ ಆಧ್ಯಾತ್ಮಿಕ ತತ್ತ್ವಗಳು ಇಂಥ ಮೂಲಭೂತ ಪ್ರಶ್ನೆಗಳನ್ನು ಕುರಿತಂತೆ ತಮ್ಮದೇ ಆದ ಸಿದ್ಧಾಂತಗಳನ್ನು ರೂಪಿಸಿವೆ. ಆದರೆ ವೈಜ್ಞಾನಿಕ ರೀತಿಯಲ್ಲಿ ಚಿಂತಿಸುವ ಆಧುನಿಕ ಮಾನ

ವನು ಭೌತಿಕ ಅಥವಾ ಇಂದ್ರಿಯಗೋಚರ ಜಗತ್ತನ್ನು ಮೀರಿದ ತತ್ತ್ವ-ಚಿಂತನೆಗಳನ್ನು ಗಂಭೀರವಾಗಿ ಪರಿಗಣಿಸುವುದೇ ಇಲ್ಲ. ಇದೇ ಅವನ ಮಿತಿ: ಇದರಿಂದ ಹಲವು ಉನ್ನತ ವಿಚಾರಗಳಿಂದ ಅವನು ವಂಚಿತನಾಗಿದ್ದಾನೆ.

### ಪ್ರಪಂಚದ ರಚನೆ

ವೇದಾಂತ ಹೇಳುವ ಪ್ರಕಾರ ಪ್ರಪಂಚವೆಲ್ಲ ಪಂಚಭೂತಗಳಿಂದ ನಿರ್ಮಾಣಗೊಂಡಿವೆ. ಭೂಮಿ, ನೀರು ಗಾಳಿ, ವಾಯು, ಆಕಾಶ — ಇವುಗಳ ಮೂಲಸ್ವರೂಪ ಇಂದ್ರಿಯಗಳಿಗೆ ನಿಲುಕದೆ ಸೂಕ್ಷ್ಮವಾಗಿವೆ; ಇವು ಒಂದರಲ್ಲೊಂದು ವಿವಿಧ ಬಗೆಯಲ್ಲಿ ಸಂಯೋಜನೆಯನ್ನು ಹೊಂದಿ, ಭೌತಿಕ ವಸ್ತುಗಳಾಗಿವೆ. ರಸಾಯನ ಶಾಸ್ತ್ರದಲ್ಲಿ ಬರುವ ಮೂಲವಸ್ತುಗಳ ಬಗೆಬಗೆಯ ಸಂಯೋಜನೆಗಳು ಕೂಡ ಇದೇ ರೀತಿಯ ಪ್ರಕ್ರಿಯೆಯಾಗಿದೆ. ಪಂಚಭೂತಗಳಿಂದ ಅಸ್ತಿತ್ವಕ್ಕೆ ಬಂದ ಜಡಜಗತ್ತು ನಿರಂತರ ಬದಲಾಗುತ್ತಿದೆ; ಪ್ರತಿಯೊಂದು ಕಣಕಣವೂ ಬದಲಾಗುತ್ತಿವೆ. ವಿವಿಧ ಸಂಯೋಜನೆಗಳಿಂದ, ಹಲವು ಆಕಾರ-ಬಣ್ಣಗಳಿಂದ ಗೋಚರವಾಗುವ ಪ್ರಪಂಚ ಪ್ರತಿ ಕ್ಷಣವೂ ಬದಲಾಗುವುದಿದ್ದರೂ, ಅವೆಲ್ಲ ಶಾಶ್ವತವಾಗಿ ಇರುವಂತೆ ಕಂಡುಬರುವುದಲ್ಲ? ಅದೇಕೆ? ಸಾವಿರಾರು ವರ್ಷಗಳಿಂದ ಇದೇ ಪರ್ವತ, ನದಿ, ಸಾಗರಗಳು ಇದ್ದಿರಲಿಲ್ಲವೆ? ಆದರೆ ಸೂಕ್ಷ್ಮವಾಗಿ ಗಮನಿಸಿದರೆ, ಈ ಯಾವ ಸಂಗತಿಗಳೂ ಹಿಂದೆ ಇದ್ದಂತೆ ಇಂದು ಇಲ್ಲ ಎಂದು ಅರ್ಥವಾಗುವುದು. ಅದೇ ರೀತಿ ಪ್ರತಿಯೊಂದು ವಸ್ತುವೂ ಬದಲಾಗುವುದು. ಬದಲಾವಣೆ ಎಂದರೆ ನಾಶವೆಂದೇ ಅರ್ಥ. ಒಂದು ವಸ್ತು ನಾಶವಾಗುವುದೆಂದರೆ, ಅದು ಎಂದೋ ಒಂದು ಸಮಯದಲ್ಲಿ ಅಸ್ತಿತ್ವಕ್ಕೆ ಬಂದಿರಲೇಬೇಕು. ಅಂದರೆ ಹಿಂದೆ ಇರಲಿಲ್ಲ ಎಂದರ್ಥ. ಈ ತರ್ಕಕ್ಕನುಗುಣವಾಗಿ, ಬದಲಾಗುವ ಯಾವ ವಸ್ತುವೂ ಶಾಶ್ವತವಲ್ಲ; ಸೃಷ್ಟಿ-ಸ್ಥಿತಿ-ಲಯಗಳ ಚಕ್ರಕ್ಕೆ ಪ್ರಪಂಚದ ಪ್ರತಿಯೊಂದು ವಸ್ತುವೂ ಒಳಗಾಗಿದೆ; ಆದ್ದರಿಂದ ಬದಲಾಗುತ್ತಿರುವುದೇ ಜಗತ್ತಿನ ಸ್ವಭಾವ. ('ಜಗತ್' ಎಂಬ ಶಬ್ದದ ಅರ್ಥವೇ 'ಚಲಿಸು' ಎಂದಾಗಿದೆ.)

### ಜೀವ, ಚೈತನ್ಯ

ಜಡವಸ್ತುಗಿಂತ ಭಿನ್ನವಾದುದು ಜೀವಸಂಕುಲದ ಚೈತನ್ಯದ ಸ್ವಭಾವ. ಚೈತನ್ಯವು ಅನೇಕ ಜಡವಸ್ತುಗಳ ಸಂಯೋಗವಾದ ದೇಹದ ಜೊತೆಗೆ ಸೇರಿಕೊಂಡು 'ಜೀವಿ'ಯೆನಿಸುವುದು. ದೇಹ ಮತ್ತು ಜೀವ ಎರಡೂ ಸೇರಿಕೊಂಡಿದ್ದರೆ ಮಾತ್ರ ಅದು 'ಜೀವಂತ' ವಾಗಿದೆ ಎನ್ನುತ್ತೇವೆ. ಯಾವಾಗ ಜೀವವು ದೇಹವನ್ನು ಬಿಟ್ಟು ತೊಲಗಿಹೋಗುವುದೋ, ಆಗ ದೇಹ ಕೇವಲ ಜಡ; ಅದು ಚೈತನ್ಯವಲ್ಲ. ಅದು ಕೊಳೆತು ಪಂಚಭೂತಗಳಲ್ಲಿ ಲೀನವಾಗಿ ಹೋಗುವುದು. ದೇಹ ಮತ್ತು ಜೀವ ಇವೆರಡನ್ನೂ ಬಂಧಿಸಿರುವ ಶಕ್ತಿ ಯಾವುದು? ಒಂದು ಜೀವಿ ಜನ್ಮ ತಳೆದಾಗ ವ್ಯಕ್ತವಾಗುವ ಚೈತನ್ಯವು, ಅದೇ ಜೀವಿ ಸತ್ತುಹೋದಾಗ ಎಲ್ಲಿಗೆ ಹೋಗುವುದು?

ಜೀವಿಗಳ ಅಸ್ತಿತ್ವವನ್ನು ಕುರಿತಾದ ಮೂಲಭೂತವಾದ ಪ್ರಶ್ನೆಯಿದು. ಅತ್ಯಂತ ಪ್ರಾಚೀನ ಕಾಲದಲ್ಲೇ ಭಾರತೀಯ ಋಷಿಮುನಿಗಳನ್ನು ಕಾಡಿದ ಈ ಪ್ರಶ್ನೆಗೆ ಉತ್ತರವೂ ದೊರಕಿತು: ಜನನ, ಮರಣಗಳಿಂದ ಕೂಡಿದ ಈ ಜೀವನ ಕೇವಲ ಒಂದು ಹಂತ ಅಷ್ಟೇ; ಈ ಬದುಕು ಮುಗಿದ ನಂತರ ಜೀವವು ಇನ್ನೊಂದು ದೇಹವನ್ನು ಪಡೆಯುವುದು; ಅಲ್ಲಿ ತನ್ನ ಬಯಕೆಗಳನ್ನು ಪೂರೈಸುತ್ತ ನಾನಾ ಅನುಭವಗಳನ್ನು ಪಡೆದು ತನ್ನ ಮತ್ತೊಂದು ಜನ್ಮವನ್ನು ಪೂರೈಸುವುದು. ಮುಂದೆ ಇನ್ನೊಂದು ಜನ್ಮ, ಅದಾದ ಮೇಲೆ ಇನ್ನೊಂದು — ಹೀಗೆ ಹಲವು ಜನ್ಮಜನ್ಮಾಂತರಗಳ ಬದುಕನ್ನು ಬದುಕುತ್ತ ಜೀವಿಯು ಪ್ರಯಾಣ ಮಾಡುವುದು. ಹೀಗೆ ಹಲವು ಜನ್ಮಗಳ ಪ್ರಯಾಣವೆಂದರೆ ಅದೊಂದು ಬಂಧನ; ಅದರಿಂದ ಬಿಡುಗಡೆಯೇ 'ಮುಕ್ತಿ' ಅಥವಾ ಸಾಕ್ಷಾತ್ಕಾರ. ಯಾವಾಗ ಜೀವಿ ಈ ಪ್ರಯಾಣವನ್ನು ಕೊನೆಗೊಳಿಸುವುದೋ ಆಗಲೇ ಮುಕ್ತಿ. ಆದರೆ ಜೀವಿಗೆ ತಾನೇತಾನಾಗಿ ಈ ಮುಕ್ತಿ ದೊರಕದು; ಜನ್ಮಜನ್ಮಾಂತರಗಳ ಜೀವನದ ನಡುವೆ ಎಲ್ಲೋ ಅರಿವು ಮೂಡುವುದು, ಈ ಪ್ರಯಾಣ ಸಾಕು ಎನ್ನಿಸಿ, ಶಾಶ್ವತ ಸತ್ಯವನ್ನು ಕಾಣಬೇಕು ಎಂಬ ಬಯಕೆ ಮೂಡುವುದು. ನಮ್ಮ ಪರಂಪರೆಯ ಪ್ರಕಾರ ದೇವರ ಕೃಪೆಯಿಂದಲೋ, ಯಾವುದೋ ದುಃಖ-ಗಂಡಾಂತರದಿಂದಲೋ ಜೀವಿಗೆ ಸತ್ಯವನ್ನು ಕಾಣುವ, ಶಾಶ್ವತ ಸುಖವನ್ನು ಕಂಡುಕೊಳ್ಳುವ ಬಯಕೆ ಉಂಟಾಗುವುದು. ಆಗ ಆ ವ್ಯಕ್ತಿ ಯೋಗ್ಯ ಗುರುವನ್ನು ಹುಡುಕುತ್ತ ಹೋಗಿ, ಗುರುವಿನ ಮಾರ್ಗದರ್ಶನದಂತೆ ಸಾಧನೆ ಮಾಡುವನು. ಆಗ ಅವನಿಗೆ ಸರಿಯಾದ ಮಾರ್ಗ ಕಾಣಿಸಿಕೊಂಡು, ಸತ್ಯದ ದಾರಿ ಗೋಚರಿಸುವುದು. ಕಾಲಕ್ರಮದಲ್ಲಿ ಅವನು ಮುಕ್ತನಾಗುವನು.

ಸ್ವತಂತ್ರವಾಗಿ ಚಿಂತಿಸಬಲ್ಲ, ಅರಿತುಕೊಳ್ಳಬಲ್ಲ, ಭಾವಿಸಬಲ್ಲ ಶಕ್ತಿ ಮಾನವನಿಗಷ್ಟೇ ಇದೆ; ಆದ್ದರಿಂದ ಜೀವಗಳಲ್ಲೆಲ್ಲ ಅವನೇ ಅತಿ ಶ್ರೇಷ್ಠ. ಅದಕ್ಕಿಂತಲೂ ಹೆಚ್ಚಾಗಿ, ಮುಕ್ತಿಗಾಗಿ ಪ್ರಯತ್ನಿಸುವ, ಅದನ್ನು ಹೊಂದುವ ಸಾಮರ್ಥ್ಯ ಮಾನವನಿಗಷ್ಟೇ ಇದೆ — ಆದ್ದರಿಂದಲೇ ಮಾನವ ಜನ್ಮ ಅತ್ಯಂತ ಶ್ರೇಷ್ಠ ಎನ್ನಲಾಗಿದೆ.

### ಪ್ರಪಂಚ ಮತ್ತು ಭಗವಂತ

ಮೇಲಿನ ಈ ದೃಷ್ಟಿಕೋನದೊಂದಿಗೆ ನಾವು ಪ್ರಪಂಚವನ್ನು ನೋಡಬೇಕು. ಜೀವಿಯು ಜಡ ಪ್ರಪಂಚದದ ನಾನಾ ವಸ್ತುಗಳನ್ನು ಬಳಸಿಕೊಂಡು ಜೀವನವನ್ನು ನಡೆಸುವುದು. ಯೋಗ್ಯ ಪರಿಸರವಿದ್ದಲ್ಲಿ ಮಾತ್ರ ಜೀವಿಗಳು ಬದುಕಬಲ್ಲವು; ಆದ್ದರಿಂದ ಜೀವಿಗಳ ಬದುಕಿಗಾಗಿಯೇ ಭೂಮಿ ಇದೆ ಎನ್ನಬಹುದೆ? ಅದೇ ರೀತಿ, ಸಮಸ್ತ ಜಡವಸ್ತುಗಳು ಚೈತನ್ಯದ ಸ್ಪರ್ಶದಿಂದ ಮಾತ್ರವೇ ನಾನಾ ಬಗೆಯ ಅನುಭವಗಳಾಗಿ ಅರಿಯಲ್ಪಡುವುವು. ಆದ್ದರಿಂದ ಜಡ ವಸ್ತುಗಳು ಚೈತನ್ಯಕ್ಕಾಗಿಯೇ ಇವೆ ಎನ್ನಬಹುದೆ? ವೇದಾಂತದ ಪ್ರಕಾರ ಒಂದೆಡೆ ಜೀವಿಗಳ ಸೃಷ್ಟಿ, ಇನ್ನೊಂದೆಡೆ ಜಡಜಗತ್ತಿನ ಸೃಷ್ಟಿ ಪರಮಾತ್ಮನಿಂದಲೇ ಉಂಟಾಗುವುದು; ಏಕಕಾಲದಲ್ಲೇ

ಉಂಟಾಗುವುದು. ಜಡ, ಚೈತನ್ಯ ಎರಡೂ ಬಗೆಯ ವಸ್ತುಗಳಿಂದ ಕೂಡಿದ ಇಡೀ ಪ್ರಪಂಚವನ್ನು ಪರಮಾತ್ಮನು ಹಾಸು-ಹೊಕ್ಕಾಗಿ ವ್ಯಾಪಿಸಿಕೊಂಡಿದ್ದಾನೆ. ಆದ್ದರಿಂದ ಅವನನ್ನು ಸಮಸ್ತ ಚರಾಚರ ಜಗತ್ತಿನ ಅಂತರ್ಯಾಮಿ ಎನ್ನಲಾಗಿದೆ. ಹಾಗಿದ್ದರೂ ಈ ಸೃಷ್ಟಿ, ಈ ಜಗತ್ತು ಅವನ ಲೀಲೆ; ಜೀವಿಗಳನ್ನು ನಾನಾ ದೃಶ್ಯಗಳ ಮೂಲಕ ಮರುಳುಗೊಳಿಸಿ, ಜನನ-ಮರಣಗಳ ಚಕ್ರದಲ್ಲಿ ನಿರಂತರ ಸುತ್ತಾಡಿಸುತ್ತಿರುವ ಮಾಯಾಜಾಲವಿದು. ಜ್ಞಾನಿಗಳು, ಸಂತರು ಮಾತ್ರವೇ ಪ್ರಪಂಚದ ಬಂಧನವನ್ನು ಕತ್ತರಿಸಿ ಹೊರ ಬರುತ್ತಾರೆ; ಸತ್ಯವನ್ನು ಕಾಣುತ್ತಾರೆ.

### ಪರಮಾರ್ಥ

ಪ್ರಪಂಚದ ಸುಖ, ದುಃಖಗಳಿಂದ ಬೇಸತ್ತು ಶಾಶ್ವತವಾದುದನ್ನು ಬಯಸಿ, ಪ್ರಪಂಚದ ಬಂಧನವನ್ನು ಕಿತ್ತೊಗೆಯಲು ಬಯಸುವ ವ್ಯಕ್ತಿಗೆ 'ಮುಮುಕ್ಷು' (ಅಂದರೆ 'ಮುಕ್ತಿಯನ್ನು ಬಯಸುವವನು' ಎಂದರ್ಥ) ಎನ್ನುತ್ತಾರೆ. ಅವನಿಗೆ ಪ್ರಪಂಚ ಅನಿತ್ಯವೆಂದೂ ಇಲ್ಲಿನ ವಸ್ತುಗಳ ಸುಖಗಳು ಕ್ಷಣಿಕವೆಂದೂ ತಿಳಿದಿದೆ. ತನ್ನ ಬದುಕು ಅಲ್ಪಕಾಲಿಕವೆಂದು ಅವನು ಅರಿತಿದ್ದಾನೆ. ಹೀಗೆ ಅರಿತು, ಸತ್ಯವನ್ನು ಕಾಣುವ ಹಂಬಲದಿಂದ ಗುರುವನ್ನು ಸಮೀಪಿಸುತ್ತಾನೆ. ಗುರುವಾದವನು ಈಗಾಗಲೇ ಸತ್ಯವನ್ನು ಕಂಡವನು; ಆದರದಿಂದ ಶಿಷ್ಯನನ್ನು ಸ್ವೀಕರಿಸಿ, ಅವನಿಗೆ ಸತ್ಯದ ದಾರಿಯನ್ನು ತೋರಿಸಿಕೊಡುತ್ತಾನೆ.

ಹೀಗೆ ವೇದಾಂತದಲ್ಲಿ ಮೋಕ್ಷವನ್ನು ಹೊಂದುವುದು ಒಂದು ಶ್ರೇಷ್ಠ ಆದರ್ಶವಾಗಿದೆ. ಪ್ರಪಂಚವನ್ನು ಮೀರಿ ಹೋಗುವ, ಇದರ ಬಂಧನವನ್ನು ಕಿತ್ತೊಗೆಯುವ ಬಯಕೆಯಾದರೂ ಏಕೆ? ಇದರಾಚೆಗೆ ಇರುವ ಸತ್ಯ ಅಂತಿಂತಹುದಲ್ಲ. ಆದಿಯೂ ಇಲ್ಲದ, ಅಂತ್ಯವೂ ಇಲ್ಲದ ಶಾಶ್ವತ ಸತ್ಯವದು. ಅದನ್ನು ಕಂಡವನ ಎಲ್ಲ ಬಯಕೆಗಳೂ ಪೂರ್ಣಗೊಳ್ಳುವವು; ಅವನು ಆ ಸತ್ಯದಲ್ಲೇ ಒಂದಾಗುವನು. ಅದು ಅತ್ಯಂತ ಜಡವಲ್ಲವೆ? ಉಪನಿಷತ್ತುಗಳು ಹೇಳುತ್ತವೆ, ಅದು ಆನಂದದ ಗಣಿ, ಕೊನೆ ಮೊದಲಿಲ್ಲದ ಆನಂದವದು. ಅಲ್ಲಿ ಜನನ-ಮರಣ, ಸುಖ-ದುಖವೇ ಮೊದಲಾದ ದ್ವಂದ್ವಗಳಿಲ್ಲ, ಯಾವುದೇ ಸಂಕಟ, ಸಮಸ್ಯೆಗಳಿಲ್ಲ. ಎಲ್ಲ ಮಿತಿಯನ್ನೂ ಮೀರಿದ, ಅನಂತವೂ, ನಿತ್ಯವೂ, ಶುದ್ಧವೂ ಆದ, ಎಲ್ಲ ಅರಿವಿನ ಆಗರವೂ ಆದ ಆ ಸತ್ಯವನ್ನು ಉಪನಿಷತ್ತು ಹೀಗೆ ವರ್ಣಿಸುತ್ತದೆ:

**ನ ತತ್ರ ಸೂರ್ಯೋ ಭಾತಿ ನ ಚಂದ್ರತಾರಕಂ**
**ನೇಮಾ ವಿದ್ಯುತೋ ಭಾಂತಿ ಕುತೋಽಯಮಗ್ನಿಃ ।**
**ತಮೇವ ಭಾಂತಮನುಭಾತಿ ಸರ್ವಂ**
**ತಸ್ಯ ಭಾಸಾ ಸರ್ವಮಿದಂ ವಿಭಾತಿ ॥**

*(ಕಠೋಪನಿಷತ್ತು, ೨.೨.೧೫)*

(ಅಲ್ಲಿ ಸೂರ್ಯನಿಲ್ಲ, ಚಂದ್ರನಿಲ್ಲ, ನಕ್ಷತ್ರಗಳಿಲ್ಲ, ಮಿಂಚುಗಳಿಲ್ಲ. ಇನ್ನು ಅಗ್ನಿಯು ಪ್ರಕಾಶಿಸುವುದೆಲ್ಲಿ? ಬೆಳಗುತ್ತಿರುವ ಅವನನ್ನೇ ಅನುಸರಿಸಿ ಎಲ್ಲವೂ ಬೆಳಗುತ್ತಿರುವುವು. ಅವನ ಪ್ರಕಾಶದಿಂದಲೇ ಪ್ರತಿಯೊಂದೂ ಬೆಳಗುತ್ತಿವೆ.) ಈ ಪ್ರಪಂಚವನ್ನು ಮೀರಿದ ಸತ್ಯವನ್ನು ಕಂಡ ಮಹಾತ್ಮರ ಉಪದೇಶಗಳೇ ಎಲ್ಲರಿಗೂ ದಾರಿದೀಪ; ಅವುಗಳೇ ಎಲ್ಲರ ಆದರ್ಶ.

### ಪ್ರಪಂಚ ಮತ್ತು ಪ್ರಾಪಂಚಿಕತೆ

'ನೀನು ಪ್ರಪಂಚದಲ್ಲಿರು, ಆದರೆ ನಿನ್ನಲ್ಲಿ ಪ್ರಾಪಂಚಿಕತೆ ಇಲ್ಲದಿರಲಿ' ಎಂಬುದು ಶ್ರೀರಾಮಕೃಷ್ಣರ ವಾಣಿ. ಹುಟ್ಟಿದ ಪ್ರತಿಯೊಂದು ಜೀವಿಯೂ ಇಲ್ಲಿ ಬದುಕಿರುವವರೆಗೆ ಈ ಪ್ರಪಂಚವನ್ನು ಆಶ್ರಯಿಸಿಕೊಂಡು ಇರಬೇಕಾದುದು ಅನಿವಾರ್ಯ. ಆದರೆ ಈ ಪ್ರಪಂಚಕ್ಕೇ ಅಂಟಿಕೊಂಡಿದ್ದರೆ, ಕೊನೆಗೊಮ್ಮೆ ಇದನ್ನು ಅಗಲಿ ಹೋಗಲೇಬೇಕಾಗಿ ಬಂದಾಗ, ಅಂದರೆ ಮೃತ್ಯು ಸಮೀಪಿಸಿದಾಗ, ಅವನಿಗೆ ಅತಿಹೆಚ್ಚಿನ ದುಃಖವುಂಟಾಗುವುದು. ಇನ್ನೇನು ಸಾಯುವ ಗಳಿಗೆ ಬಂದಾಗಲೂ ಅವನು 'ಅಯ್ಯೋ, ದೀಪದ ಬೆಳಕು ಸಣ್ಣದು ಮಾಡು, ಎಣ್ಣೆ ಹೆಚ್ಚು ಖರ್ಚಾದೀತು' ಎಂದು ತನ್ನ ಜಿಪುಣಬುದ್ಧಿಯನ್ನು ಬಿಡಲಾರ. ಜೀವನವೆಲ್ಲ ಹಣ ಕೂಡಿಡುವುದಕ್ಕಾಗಿಯೇ ತನ್ನ ಚೈತನ್ಯವನ್ನು ವಿನಿಯೋಗಿಸಿದರೆ, ಅಂತಹ ವ್ಯಕ್ತಿ ಕೊನೆಯ ಗಳಿಗೆ ಬಂದಾಗಲೂ ಹಣದ ಚಿಂತನೆ ಬಿಟ್ಟರೆ ಬೇರೇನು ಮಾಡಬಲ್ಲ? ಆದರೆ ಒಂದು ಚಿಕ್ಕಾಸು ಕೂಡ ಈ ಪ್ರಪಂಚವನ್ನು ಬಿಟ್ಟು ಅವನೊಂದಿಗೆ ಹೋಗಲಾರದು. ತಾನು ಕೂಡಿಟ್ಟ ಸೊತ್ತು, ಬದುಕು, ಭಾಗ್ಯ, ಕುಟುಂಬ, ಜಮೀನು ಎಲ್ಲವನ್ನೂ ಬಿಟ್ಟು ಹೋಗಬೇಕಾದವನ ದುಃಖ ಸಾಮಾನ್ಯವಾದುದಲ್ಲ. ಈ ಕಾರಣದಿಂದಲೇ ಪ್ರಪಂಚದ ನಶ್ವರತೆಯನ್ನೂ, ಅದು ನಮ್ಮನ್ನು ಮರುಳುಗೊಳಿಸುವ ಬಗೆಯನ್ನೂ ಯಾವಾಗಲೂ ಚಿಂತಿಸಬೇಕೆಂದು ವೇದಾಂತ ಹೇಳುತ್ತದೆ. ಶಾಶ್ವತವಲ್ಲದ ಪ್ರಪಂಚದಲ್ಲಿ ಅತಿಥಿಯಂತೆ ಇರುವವನು ಈ ಪ್ರಪಂಚವನ್ನು ಬಿಡುವಾಗ ದುಃಖಿಸುವುದಿಲ್ಲ; ತನ್ನ ನಿಜವಾದ ಮನೆಗೆ ಮರಳುವ ಅತಿಥಿಯಂತೆ ಸಾವಿಗೆ ಸಿದ್ಧನಾಗುತ್ತಾನೆ. ಈ ಪ್ರಪಂಚವನ್ನು ಮೀರಿದ ಶಾಶ್ವತ ಸತ್ಯವನ್ನು ಹೊಂದುವ ಬಯಕೆ ಹೊತ್ತವನು ಅಂತ್ಯಕಾಲದಲ್ಲಿ ಅಂತಹ 'ಸತ್ಯಸ್ಯ ಸತ್ಯ'ವಾದ ಪರಮಾತ್ಮನನ್ನೇ ಚಿಂತಿಸುತ್ತಾನೆ. ಗೀತೆ ಹೇಳುತ್ತದೆ, 'ಮರಣಕಾಲದಲ್ಲಿ ನನ್ನನ್ನೇ ಸ್ಮರಿಸುತ್ತಾ ದೇಹವನ್ನು ಬಿಡುವವನು ನನ್ನ ಭಾವವನ್ನೇ ಹೊಂದುವನು; ಇದರಲ್ಲಿ ಸಂಶಯವಿಲ್ಲ' ಎಂದು. ಇದು ಪ್ರಾಪಂಚಿಕತೆಯನ್ನು ಮೀರಿ ಹೋಗುವ ಬಗೆ.

### ಏಪ್ರಿಲ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧೧ | ಬುಧವಾರ | ಏಕಾದಶಿ |
| ೧೮ | ಬುಧವಾರ | ಶ್ರೀ ಬಸವ ಜಯಂತಿ |
| ೨೦ | ಶುಕ್ರವಾರ | ಶ್ರೀ ಶಂಕರ ಜಯಂತಿ |
| ೨೧ | ಶನಿವಾರ | ಶ್ರೀ ರಾಮಾನುಜ ಜಯಂತಿ |
| ೨೬ | ಗುರುವಾರ | ಏಕಾದಶಿ |
| ೨೯ | ಭಾನುವಾರ | ಬುದ್ಧಪೂರ್ಣಿಮಾ |